**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5006/2025 ಪ್ರಾಸಾ-03
ಚಾಸಾ-04

ದಿನಾಂಕಃ 01-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಈರಣ್ಣ |
| **ತಂದೆಯ / ಗಂಡನ ಹೆಸರು** | ಈರಣ್ಣ |
| **ವಯಸ್ಸು** | 49 |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ಹೊನ್ನಸಮುದ್ರ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಚಾಸಾ-1 ಮತ್ತು 2 ನಮ್ಮ ಊರಿನವರು ಅವರನ್ನು ನಾನು ನೋಡಿರುತ್ತೇನೆ. ಆರೋಪಿತರು ನಮ್ಮ ಊರಿನವರು ಅವರನ್ನು ನೋಡಿರುತ್ತೇನೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ನಾನು ಯಾವುದೇ ಘಟನೆ ನೋಡಿರುವುದಿಲ್ಲ, ಆರೋಪಿತರು ಏನು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ. 22/23.07.2023 ರಂದು ಮಧ್ಯದ ರಾತ್ರಿ 3-00 ಗಂಟೆಗೆ ನಾನು ಬಸ್ ನಿಲ್ದಾಣದ ಕಡೆ ಬರುತ್ತಿದ್ದಾಗ ಚಾಸಾ-1 ರವರು ಇಟ್ಟಿದ್ದ ಪೆಟ್ಟಿಗೆ ಅಂಗಡಿಗೆ ಆರೋಪಿತರಿಬ್ಬರು ಬೆಂಕಿ ಇಟ್ಟಿದ್ದನ್ನು

ಚಾಸಾ-04

ನೋಡಿದೆ , ಅಷ್ಟರಲ್ಲಿ ಬೆಂಕಿ ಇಟ್ಟಿದ್ದನ್ನು ನೋಡಿದ ಚಾಸಾ-3 ರವರು ಅಂಗಡಿ ಮನೆ ಕಡೆಯಿಂದ ನಡೆದುಕೊಂಡು ಬಂದನು ನಾನು ಆರೋಪಿತರಿಗೆ ಯ್ಯಾಕೆ ಇಂತಹ ಕೆಲಸ ಮಾಡಿದ್ದೀರಿ ಎಂದು ಕೂಗಿ ಕೇಳಿದ್ದು ಚಾಸಾ-3 ರವರು ಬೆಂಕಿ ನಂದಿಸಲು ಅವರ ಮನೆ ಬಳಿ ನೀರು ತೆಗೆದುಕೊಂಡು ಬರುವಂತೆ ನನಗೆ ತಿಳಿಸಿ ಅವರು ಸದಾಶಿವರ ಮನೆಯವರಿಗೆ ವಿಚಾರ ತಿಳಿಸಿ ಕರೆದುಕೊಂಡು ಬರುತ್ತೇನೆ ಎಂದು ಹೇಳಿ ಹೋದರು ನಂರ ಚಾಸಾ-1 ಮತ್ತು 2 ರವರು ಜೊರಾಗಿ ಅಳುತ್ತಾ ಅಂಗಡಿ ಹತ್ತಿರ ಬರುವಷ್ಟರಲ್ಲಿ ಅಂಗಡಿ ಪೂರ ಸುಟ್ಟು ಹೋಗಿದ್ದು ಚಾಸಾ-1 ಮತುತ 2 ರವರು ಬರುವುದನ್ನು ನೋಡಿ ಆರೋಪಿತರಿಬ್ಬರು ಕತ್ತಲಲ್ಲಿ ಓಡಿ ಹೋದರು , ಈ ಬಗ್ಗೆ ಚಾಸಾ-1 ರವರು ದೂರು ಕೊಟ್ಟಿರುವುದು ಗೊತ್ತಾಗಿರುತ್ತದೆ ಹಾಗೂ ಪೆಟ್ಟಿಗೆ ಅಂಗಡಿ ಸುಟ್ಟು ಹೋಗಿರುವುದರಿಂದ ಸದಾಶಿವ ರವರಿಗೆ 10 ಸಾವಿರ ರೂಪಾಯಿ ನಷ್ಟ ವಾಗಿರುತ್ತದೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು . ನಾನು ಘಟನೆಯನ್ನು ಕಾಣ್ಣಾರೆ ನೋಡಿ ನಿಪಿ-3 ರಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:- ಆರೋಪಿ ಪರ ವಕೀಲರು ಶ್ರೀ ಎಸ್.ಸಿ.ಜಿ. ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**